ಕೋಲಾರ ಡಿಸ್ಟ್ರಿಕ್ಟ್.

ಇಸ್ತಿಹಾರ್ನಾಮೆ.

ಸರ್ಕಾರಕ್ಕೆ ಬರಬೇಕಾದ ಬಾಕೀಗಾಗಿ ಮುಳಬಾಗಲ್ ತಾಲ್ಲೂಕು ಮಲ್ಲನಾಯಕನಹಳ್ಳಿ ಹೋಬಳಿ ಕಾಯಂಗುತ್ತಾ ಜಂಗಮಹೊಸಹಳ್ಳಿ ಗ್ರಾಮವು 1909ನೆ ಇಸವಿ ಫೆಬ್ರವರಿ 22ನೆ ತಾರೀಖಿನಲ್ಲಿ ಮುಳಬಾಗಲ್ ತಾಲ್ಲೂಕು ಕಛೇರಿಯಲ್ಲಿ ಬಹಿರಂಗವಾಗಿ ಹರಾಜು ಹಾಕಲ್ಪಡುತ್ತೆ.

ಷರಾ—ಹೆಚ್ಚಿನ ತಪ್ಶೀಲಿಗೆ ಸ್ ೧೯೦೯ನೆ ಇಸವಿ ಜನವರಿ 28ನೆ ಮಂಗಳವಾರ ಮೈಸೂರು ಗೆಜೆಟ್ಟಿನ 2ನೆ ಭಾಗದ 46ನೆ ಪುಟದಲ್ಲಿ ಪ್ರಕಟಿಸಿರುವ ಇಸ್ತಿಹಾರ್ನಾಮೆಯನ್ನು ನೋಡಬಹುದು.

ಸರ್ಕಾರಕ್ಕೆ ಬರಬೇಕಾದ ಬಾಕೀಗಾಗಿ ಮುಳಬಾಗಲ್ ತಾಲ್ಲೂಕು ಆನಿ ಹೋಬಳಿ ಜೋಡಿ ವೀರಕೆಟ್ಟಹಳ್ಳಿ ಗ್ರಾಮವು ಸ್ ೧೯೦೯ನೆ ಇಸವಿ ಫೆಬ್ರವರಿ 23ನೆ ತಾರೀಖಿನಲ್ಲಿ ಮುಳಬಾಗಲ್ ತಾಲ್ಲೂಕು ಕಛೇರಿಯಲ್ಲಿ ಬಹಿರಂಗವಾಗಿ ಹರಾಜು ಹಾಕಲ್ಪಡುತ್ತೆ.

ಷರಾ—ಹೆಚ್ಚಿನ ತಪ್ಶೀಲಿಗೆ ಸ್ ೧೯೦೯ನೆ ಇಸವಿ ಜನವರಿ 28ನೆ ಮಂಗಳವಾರ ಮೈಸೂರು ಗೆಜೆಟ್ಟಿನ 2ನೆ ಭಾಗದ 47ನೆ ಪುಟದಲ್ಲಿ ಪ್ರಕಟಿಸಿರುವ ಇಸ್ತಿಹಾರ್ನಾಮೆಯನ್ನು ನೋಡಬಹುದು.

ಸರ್ಕಾರಕ್ಕೆ ಬರಬೇಕಾದ ಬಾಕೀಗಾಗಿ ಮುಳಬಾಗಲ್ ತಾಲ್ಲೂಕು ಆವನಿ ಹೋಬಳಿ ಜೋಡಿ ದೇವರಾಯಸಂದ್ರ ಗ್ರಾಮವು 1909ನೆ ಇಸವಿ ಫೆಬ್ರವರಿ 22ನೆ ತಾರೀಖಿನಲ್ಲಿ ಮುಳಬಾಗಲ್ ತಾಲ್ಲೂಕು ಕಛೇರಿಯಲ್ಲಿ ಬಹಿರಂಗವಾಗಿ ಹರಾಜು ಹಾಕಲ್ಪಡುತ್ತೆ.

(ಷರಾ—ಹೆಚ್ಚಿನ ತಪಶೀಲಿಗೆ ಸ್ ೧೯೦೯ನೆ ಇಸವಿ ಜನವರಿ 28ನೆ ಮಂಗಳವಾರ ಮೈಸೂರು ಗೆಜೆಟ್ಟಿನ 2ನೆ ಭಾಗದ 45ನೆ ಪುಟದಲ್ಲಿ ಪ್ರಕಟಿಸಿ ಆಗಿರುವ ಇಸ್ತಿಹಾರ್ನಾಮೆಯನ್ನು ನೋಡಬಹುದು.

ಸರ್ಕಾರಕ್ಕೆ ಬರಬೇಕಾದ ಬಾಕೀಗಾಗಿ ಮಾಲೂರು ತಾಲ್ಲೂಕು ನರಸಾಪುರ ಜೋಬಳಿ ಜೋಡಿ ಬೆಳ್ಳೂರು ಗ್ರಾಮವು 1909ನೆ ಇಸವಿ ಫೆಬ್ರವರಿ 26ನೆ ತಾರೀಖಿನಲ್ಲಿ ಮಾಲೂರು ತಾಲ್ಲೂಕು ಕಛೇರಿಯಲ್ಲಿ ಬಹಿರಂಗವಾಗಿ ಹರಾಜು ಹಾಕಲ್ಪಡುತ್ತೆ.

(ಷರಾ ಹೆಚ್ಚಿನ ತಪ್ಶೀಲಿಗೆ ಸ್ ೧೯೦೯ನೆ ಇಸವಿ ಜನವರಿ 28ನೆ ಮಂಗಳವಾರ ಮೈಸೂರು ಗೆಜೆಟ್ಟಿನ 2ನೆ ಭಾಗದ 48ನೆ ಪುಟದಲ್ಲಿ ಪ್ರಕಟಿಸಿರುವ ಇಸ್ತಿಹಾರ್ನಾಮೆಯನ್ನು ನೋಡಬಹುದು.)

ಎಸ್. ಶಾಮಣ್ಣ,
ಫಾರ್ ಡೆಪ್ಯೂಟಿ ಕಮಿಷನರ್.

ಚಿತ್ರದುರ್ಗ ಡಿಸ್ಟ್ರಿಕ್ಟ್.

ಸ್ ೧೯೦೮ನೆ ಇಸವಿ ಡಿಸೆಂಬರ್ ತಿಂಗಳು 4ರಲ್ಲಿ ನಡೆದ ಚಿತ್ರದುರ್ಗದ ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗಿನ ಪ್ರೊಸೀಡಿಂಗ್ಸ್.

ಹಾಜರು.

ಮಾ|| ರಾ|| ರಾ|| ಎಂ. ಚಂಗಯ್ಯ ಶೆಟ್ಟರವರು, (ಪ್ರೆಸಿಡೆಂಟ್).

ಅಫಿಷಿಯಲ್ ಮೆಂಬರುಗಳು.

(1) ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರವರು.
(2) ದಾವಣಗೆರೆ ಸಬ್ ಡಿವಿಜ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರು.
(3) ಚಿತ್ರದುರ್ಗದ ಸಬ್ ಡಿವಿಜ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರು.
(4) ಬೋರ್ಡಿನ ವೈಸ್ ಪ್ರೆಸಿಡೆಂಟರವರು.

ನಾನ್ ಅಫಿಷಿಯಲ್ ಮೆಂಬರುಗಳು.

1. ಮೆ|| ಪಿ. ನಂಜುಂಡಪ್ಪನವರು.
2. ,, ಮಹಮದ್ ದಸ್ತಗಿರಿ ಸಾಹೇಬರು.
3. ,, ಶಾನುಭೋಗ ಸುಬ್ಬಣ್ಣನವರು.
4. ,, ಬೆಳಗಟ್ಟೆ ಅಜ್ಜಪ್ಪನವರು.
5. ,, ನಾಡಿಗ ಸಿದ್ದರಾಮಯ್ಯನವರು.
6. ,, ಯಲೆ ಬಸಪ್ಪನವರು.
7. ,, ಕುಬಾಜಿ ದುರ್ಗಪ್ಪನವರು.
8. ,, ಭಾರಿ ರುದ್ರಪ್ಪನವರು.
9. ,, ನಾಡಿಗ ಬಾಲಕೃಷ್ಣರಾಯರು.
10. ,, ಪಾಳೇದಹಳ್ಳಿ ನಾಗಪ್ಪನವರು.
11. ,, ಬಿ. ವಿ. ನಾರಾಯಣರಾವ್.
12. ,, ಬಿಳಿಚೋಡು ಮೂಡ್ಲಗಿರಿಯಪ್ಪನವರು.

ಗೈರ್ ಹಾಜರು.

ಆಫಿಷಿಯಲ್ ಮೆಂಬರುಗಳು.

(1) ಚಿತ್ರದುರ್ಗದ ಡಿವಿಜ್ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರವರು.
(2) ಚಿತ್ರದುರ್ಗ ಡಿಸ್ಟ್ರಿಕ್ಟ್ ಸ್ಕೂಲ್ ಇಲಾಖಾ ಡೆಪ್ಯುಟಿ ಇನ್‌ಸ್ಪೆಕ್ಟರವರು.

ನಾನ್ ಆಫಿಷಿಯಲ್ ಮೆಂಬರುಗಳು.

1. ಮೆ॥ ಎಂ. ಅನಂತಕೃಷ್ಣರವರು.
2. ,, ಮುತ್ತುಗದೂರು ಪರ್ವತಪ್ಪನವರು.
3. ,, ಶಾನುಭೋಗ ಚನ್ನಗಿರಯ್ಯನವರು.
4. ,, ಸಿ. ವಿರೂಪಾಕ್ಷಪ್ಪನವರು.
5. ,, ನಬೀ ಸಾಹೇಬರು.
10. ,, ಹೆಚ್. ಸುಬ್ಬರಾವ್.

ಜಗಳೂರು ತಾಲ್ಲೂಕು ಅಮಲ್ದಾರ್ರು ಮತ್ತು ಹರಿಹರದ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ರು ವಿನಹ ಬಾಕಿ ತಾಲ್ಲೂಕಿನ ಅಮಲ್ದಾರ್ರು ಹಾಜರಾಗಿದ್ದರು.

I. ಗತ ಸಾಲಿನ ಪೀಂಚಲಾ ಕಾಮಗಾರಿಗಳನ್ನು ಪೂರೈಸಲು ಜಾಲ್ತಿ ಸಾಲಿನ ಅಪ್ರೊಪ್ರಿಯೇರ್ಷ ಸ್ಟೇಟ್‌ಮೆಂಟು ಗವರ್ನ್‌ಮೆಂಟಿನಿಂದ ಮಂಜೂರಾಗಿ ಬಂದಿರುವದನ್ನು ಓದಿ ಈ ಅಂಶವನ್ನು ಸಂಬಂಧಪಟ್ಟ ಅಮಲ್ದಾರ್ರಿಗೆ ಬರಿಸಬೇಕಾಗಿ ತೀರ್ಮಾನಿಸಲಾಯಿತು.

II. ಮೈಸೂರಿನಲ್ಲಿ ಒಂದು "ಆಯುರ್ವೇದಿಕ್ ಕಾಲೇಜು" ಯಾ ವೈದ್ಯಶಾಲೆಯನ್ನು ಸ್ಥಾಪಿಸುವದನ್ನು ಮಂಜೂರ್ಮಾಡಿರುವದಾಗಿ ಗವರ್ನ್‌ಮೆಂಟಿನಿಂದ ತಲ್ಪಿರತಕ್ಕ ಪ್ರೊಸೀಡಿಂಗ್ಸನ್ನು ಓದಿ ರಿಕಾರ್ಡು ಮಾಡಲಾಯಿತು.

III. ರೈತರಿಗೆ ರಿಯಾಯಿತಿ ದರದಲ್ಲಿ ಅವೃತವಾಹಲ್ ಹೋರಿಗಳನ್ನು ಸಪ್ಲೈ ಮಾಡಿಸತಕ್ಕ ವಿಚಾರದಲ್ಲಿ ಗವರ್ನ್‌ಮೆಂಟಿನಿಂದ ಸಾದರಾದ ಪ್ರೊಸೀಡಿಂಗ್ಸನ್ನು ಓದಲಾಯಿತು.

ರೆಜಲ್ಯೂರ್ಷ—ಈ ಅಂಶವನ್ನು ಸಂಬಂಧಪಟ್ಟ ಜನಗಳಿಗೆ ತಿಳಿಸಬೇಕಾಗಿ ತೀರ್ಮಾನಿಸಲಾಯಿತು.

IV. ಚಿತ್ರದುರ್ಗದಲ್ಲಿ ಚಾಮರಾಜ ಮೆಮೋರಿಯಲ್ ಹಾಲ್‌ಗೆ ಲೈಟಿಂಗ್ ಕಂಡಕ್ಟರು ಇಡತಕ್ಕ ಬಗ್ಗೆ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರವರಿಂದ ತಲ್ಪಿದ 555 ರೂಪಾಯಿನ ಅಂದಾಜುವನ್ನು ಓದಲಾಯಿತು.

ರೆಜಲ್ಯೂರ್ಷ—ಇದನ್ನು ಮಂಜೂರಿ ಬಗ್ಗೆ ಗವರ್ನ್‌ಮೆಂಟಿಗೆ ಕಳುಹಿಸಬೇಕಾಗಿಯೂ ಈ ಬಾಬತು ಮೊಬಲಗನ್ನು ಡಿಸ್ಟ್ರಿಕ್ಟ್ ಫಂಡ್ ಬಡ್ಜಟಿನಲ್ಲಿ ಡಿ. ಪಿ. ಡಬ್ಲಿಯೂ ಅಲಾಟ್‌ಮೆಂಟ್ ಪೈಕಿ ಕೊಡಬೇಕಾಗಿಯೂ ನಿರ್ಧರಿಸಲಾಯಿತು.

V. ಸ್ಯಾನಿಟೆರಿ ಇನ್‌ಸ್ಪೆಕ್ಟರೊಂದಿಗೆ ವರು ಇನ್‌ಸ್ಪೆಕ್ಟರನ್ನು ಇಟ್ಟುಕೊಳ್ಳತಕ್ಕ ಬಾಬ್ತೆ ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನವರು ಮಾಡಿದ ಪ್ರೊಪೋಜಲನ್ನು ತಿರಸ್ಕರಿಸಿ ವರ್ತು ಇನ್‌ಸ್ಪೆಕ್ಟರುಗಳ ಏವಜೆಗೆ ಸ್ಯಾನಿಟೆರಿ ಇನ್‌ಸ್ಪೆಕ್ಟರುಗಳನ್ನು ಜಾಗ್ರತೆಯಾಗಿ ಮೊಕರರ್ರಾಡಬೇಕಾಗಿ ಗವರ್ನ್‌ಮೆಂಟಿನಿಂದ ತಲ್ಪಿರತಕ್ಕ ಪ್ರೊಸಿಡಿಂಗ್ಸನ್ನು ಓದಿ ರಿಕಾರ್ಡು ಮಾಡಲಾಯಿತು.

VI. ಅರಸಿನಗುಂಡಿ-ಗೋಕಟ್ಟೆ ರಿಪೇರಿ ಬಗ್ಗೆ ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ 30—11—08ನೆ ನಮ್ರುಂ 1246ನೆ ನಂಬರು ಡಾಕೆಟ್ಟಿನೊಂದಿಗೆ ತಲ್ಪಿರತಕ್ಕ 1,770 ರೂಪಾಯಿನ ರಿವೈಜ್ಡ್ ಅಂದಾಜುವನ್ನು ಓದಲಾಯಿತು.

ರೆಜಲ್ಯೂರ್ಷ—ಇದೆನ್ನು ಅಪ್ರೂವ್‌ಮಾಡಿ ಮಂಜೂರಿ ಬಗ್ಗೆ ಗವರ್ನ್‌ಮೆಂಟಿಗೆ ಕಳುಹಿಸಬೇಕಾಗಿ ತೀರ್ಮಾನಿಸಲಾಯಿತು.

VII. ಬೋರ್ಡಿನವರ ಮಂಜೂರು ನಿರೀಕ್ಷಣೆ ಮೇಲೆ ಪ್ರೆಸಿಡೆಂಟರವರು ಮಂಜೂರ್ಮಾಡಿದ್ದ ಕಾಮಗಾರಿಗಳ ಲಿಸ್ಟನ್ನು ಓದಲಾಯಿತು.

ರೆಜಲ್ಯೂರ್ಷ—ಅಪ್ರೂವ್ ಮಾಡಿರುತ್ತೆ.

VIII. ಮುಂದಿನ ನಿಾಟಿಂಗ್ 1909ನೆ ಫೆಬ್ರವರಿ 19ನೆ ತಾರೀಖಿನ ದಿವಸ ನಡಿಯಬೇಕಾಗಿ ತೀರ್ಮಾನಿಸಲಾಯಿತು.

ಎಂ. ಚಿಂಗೈಯ್ಯ ಶೆಟ್ಟಿ,
ಪ್ರೆಸಿಡೆಂಟ್.

ಮೈಸೂರು ಗವರ್ನ್‌ಮೆಂಟ್ ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರರವರ ಆಫಿಸ್.

ಬೆಂಗಳೂರು, ತಾರೀಖು 26-27ನೆ ಜನವರಿ 1909ನೆ ಇಸವಿ.

ನೋಟಿಫಿಕೇರ್ಷ ನಂ. 396—C. S. 145–148.

ಈ ಕೆಳಗೆ ನಮೂದಿಸಿರುವ ಕೋ ಆಪರೇಟಿವ್ ಸೊಸೈಟಿಗಳು 1905ನೆ ಇಸವಿಯ ಮೈಸೂರು ಕೋ ಆಪರೇಟಿವ್ ಸೊಸೈಟಿಗಳ ರೆಗ್ಯುಲೇರ್ಷ 6ನೆ ಸೆಕ್ಷರ್ (2)ನೆ ಒಳ ಪ್ರಕರಣಕ್ಕನುಸಾರವಾಗಿ ರಿಜಿಸ್ಟರು ಮಾಡಲ್ಪಟ್ಟಿರುತ್ತವೆ :—

ಹೆಸರು.	ಸ್ಥಳ.	ರಿಜಿಸ್ಟರಾದ ತಾರೀಖು.
ಬೆಂಗಳೂರು ಸೆಂಟ್ರಲ್ ಕೋ ಆಪರೇಟಿವ್ ಬ್ಯಾಂಕ್, ಲಿಮಿಟೆಡ್.	ಬೆಂಗಳೂರು ಸಿಟಿ.	17ನೆ ಡಿಸೆಂಬರು 1908ನೆ ಇಸವಿ
ಹಾಲಗೋನಹಳ್ಳಿ ಕೋ ಆಪರೇಟಿವ್ ಸೊಸೈಟಿ, ಲಿಮಿಟೆಡ್.	ಹಾಲಗೋನಹಳ್ಳಿ ಜೋಡಿ ಗ್ರಾಮ, ಕುಣಿಗಲ್ ತಾಲ್ಲೂಕು.	14ನೆ ಜನವರಿ 1909ನೆ ಇಸವಿ.

ಎಂ. ಶಾಮರಾವ್,
ರಿಜಿಸ್ಟ್ರಾರ್, ಕೋ ಆಪರೇಟಿವ್ ಸೊಸೈಟೀಸ್.